ಸಿ ಸಿ ನಂಬರ 87/2021
ಪಿ ಡಬ್ಲ್ಯೂ 3

**ದಿನಾಂಕ: 03-10-2024**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಚಾಸಾ-1, 6, 10 ರವರು ನನಗೆ ಪರಿಚಯ ಇರುತ್ತಾರೆ. ನಿಮ್ಮ ಮತ್ತು ಸದರಿಯವರು ಮನೆ ಎದುರು - ಬದುರು ಇರುತ್ತದೆ ಎಂದರೆ ಸಾಕ್ಷಿ ಇಲ್ಲ ಒಂದೇ ಓಣಿಯಲ್ಲಿ ಇರುತ್ತದೆ ಎನ್ನುತ್ತಾರೆ. ನಾನು ಬಣಗಾರ ಗಲ್ಲಿಯಲ್ಲಿ ಕುಳಿತಿದ್ದಾಗ ಪೊಲೀಸರು ನನ್ನನ್ನು ಕರೆಸಿರುತ್ತಾರೆ. ಚಾಸಾ-7 ರವರು ನನ್ನನ್ನು ಕರೆದಿರುತ್ತಾರೆ. ಬಣಗಾರ ಗಲ್ಲಿಯಲ್ಲಿ ನೀವು ಒಬ್ಬರೆ ಇದಿರ ಎಂದರೆ ಸಾಕ್ಷಿಯು ಇಲ್ಲ ನನೊಂದಿಗೆ 2-3 ಜನ ಇದ್ದರು ಎನ್ನುತ್ತಾರೆ. ಆಗ ಸಮಯ 9-00 ಗಂಟೆಯಾಗಿತ್ತು. ಚಾಸಾ-7 ರವರು ಏನೆಂದು ಕರೆದುಕೊಂಡು ಹೋಗಿರುತಾರೆ ಎಂದರೆ ಸಾಕ್ಷಿಯು ಸಾಯಬರು ಪಂಚನಾಮೆಗೆ ಬಂದಿದ್ದಾರೆ ಬಾ ಎಂದು ಕರೆದುಕೊಂಡು ಹೋಗಿರುತ್ತಾರೆ. ಘಟನಾ ಸ್ಥಳದಲ್ಲಿ ಪೊಲೀಸರು, ಚಾಸಾ-2 ಇದ್ದರು. ನನ್ನ ಸಮಕ್ಷಮ ಮುದ್ದೆ ಮಾಲು 1 ಮತ್ತು 2ನ್ನು ಜಪ್ತು ಮಾಡಿರುತ್ತಾರೆ. ಅವರು ಕೇಳಿದರು ನಾವು ಇಬ್ಬರು ಹೊಡೆದಾಡುತ್ತಿದ್ದರು ಎಂದರೆ ತೋರಿಸಿದೇವು ನಂತರ ಸಹಿ ಮಾಡಲು ಹೇಳಿದರು ಸಹಿ ಮಾಡಿರುತ್ತೇವೆ ಎಂದು ಹೇಳುತ್ತಾರೆ. ನನಗೆ ಓದಲು ಬರೆಂದುಲು ಬರುವುದಿಲ್ಲ. ಅವರು ಸಹಿ ಮಾಡು ಎಂದು ಹೇಳಿದ ಕಾರಣ ನೀವು ಸಹಿ ಮಾಡಿರುತ್ತೀರಿ ಎಂದರೆ ಸರಿ. ಅದರಲ್ಲಿ ಏನು ಬರೆದಿದರುತ್ತಾರೆ ಎಂದು ನಿಮಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನಿಮ್ಮ ಸಮಕ್ಷಮ ಅಳತೆ ಮಾಡಿರುತ್ತಾರೆ ಎಂದುರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಚಾಸಾ-1, 6 ಮತ್ತು 10 ನಿಮ್ಮ ಗೆಳೆಯರಾಗಿದ್ದು, ನೀವು ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ

**ದಿನಾಂಕ: 03-10-2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ನನಗೆ ಚಾಸಾ-1, 6, 10 ವರು ಪರಿಚಯ ಇರುತ್ತದೆ. ನೀವು ಈ ದಿನ ಅವರೊಂದಿಗೆ ನ್ಯಾಯಾಲಯಕ್ಕೆ ಬಂದಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ನಾನು ಪ್ರತ್ಯೇಕವಾಗಿ ಬಂದಿರುತ್ತೇನೆ ಎನ್ನುತ್ತಾರೆ. ಪ್ರತಿ ಮುದ್ದತ್ತಿನಲ್ಲೂ ನೀವು ಚಾಸಾ-1 ರವರೊಂದಿಗೆ ಬಂದಿರುತ್ತೀರಿ ಎಂದರೆ ಸರಿ. ನಾವು ನನ್ನ ಗಾಡಿಯಲ್ಲಿ ಬಂದಿರುತ್ತೇನೆ. ಪಂಚನಾಮೆಗೆ ಪೊಲೀಸರು ಕರೆದಿದ್ದರು. ನಾನು ಬಸ ಸ್ಟಾಂಡನಲ್ಲಿ ಇದ್ದೆ ಪೋನ್ ಹಚ್ಚಿ ಕರೆಸಿಕೊಂಡರು. ನೀವು ಪೊಲೀಸರಿಗೆ ಪೋನ ನಂಬರ ನೀಡಿದ್ದಿರಾ ಎಂದರೆ ಸಾಕ್ಷಿ ಇಲ್ಲ ಅವರಿಗೆ ಯಾರು ಕೊಟ್ಟರೊ ಗೊತ್ತಿಲ್ಲ ಎನ್ನುತ್ತಾರೆ. ನಾನು ಪೊಲೀಸರನ್ನು ನನ್ನ ನಂಬರ ಅವರಿಗೆ ಯಾಕೆ ಕೊಟ್ಟರು ಏತಕ್ಕಾಗಿ ನನನ್ನು ಕರೆಸಿದ್ದಿರಿ ಎಂದು ಕೇಳಿದ್ದಿರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ನನಗೆ ಅಲ್ಲಿಗೆ ಹೋದ ನಂತರ ನನನ್ನು ಯಾಕೆ ಕರೆಸಿದ್ದಾರೆ ಎಂದು ಗೊತ್ತಾಯಿತು. ಘಟನಾ ಸ್ಥಳಕ್ಕೆ ನಾನು ಹೋದೆ. ಅಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿ, ಚಾಸಾ-1, 3 ಹಾಗೂ ಇಬ್ಬರು ಪೊಲೀಸರು ಇದ್ದರು. ನಾನು ಪೊಲೀಸರು ಹೆಸರನ್ನು ಕೇಳಿರುವುದಿಲ್ಲ. ನನಗೆ ಘಟನೆ ಆಗಿದ್ದ ಬಗ್ಗೆ ಮೊದಲೆ ಗೊತ್ತಿತ್ತು. ನೀವು ಸದರಿ ಘಟನೆಯನ್ನು ನೋಡಿದ್ದಿರಾ ಎಂದರೆ ಸಾಕ್ಷಿಯು ನೋಡಿದ್ದಿನಿ ಎನ್ನುತ್ತಾರೆ.

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ಪಂಚನಾಮೆಗೆ ಘಟನಾ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಅವರು ಅಲ್ಲೆ ಬರೆದಿರುತ್ತಾರೆ. ನಾನು ಓದಿ ಸಹಿ ಮಾಡಿರುತ್ತೇನೆ. ಘಟನಾ ಸ್ಥಳದ ದಕ್ಷಿಣಕ್ಕೆ -ಖುಲ್ಲಾ ಜಾಗೆ ಇರುತ್ತದೆ. ಪೂರ್ವಕ್ಕೆ - ಮಲ್ಲಪ್ಪ ತೋಟಗಿರವರು ಮನೆ, ಪಶ್ಚಿಮಕ್ಕೆ - ರಸ್ತೆ ಇರುತ್ತದೆ. ನಿಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ, ನೀವು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತೀದ್ದಿರಿ ಎಂದರೆ ಸರಿಯಲ್ಲ. ನಿಮ್ಮ ಸಮಕ್ಷಮ ಯಾವುದೇ ಪೋಟೋ ತೆಗೆದಿರುವುದಿಲ್ಲ, ಪಂಚನಾಮೆ ಮಾಡಿರುವುದಿಲ್ಲ ಸುಳ್ಳು ಸಾಕ್ಷಿ ನುಡಿಯುತ್ತೀದ್ದಿರಿ ಎಂದರೆ ಸರಿಯಲ್ಲ.

ನಾನು ಪೊಲೀಸರ ಸಮಕ್ಷಮ ಘಟನೆಯನ್ನು ನಾನು ನೋಡಿರುತ್ತೇನೆ ಎಂದು ಹೇಳಿರುತ್ತೇನೆ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ. ಚಾಸಾ-1, 6 ಮತ್ತು 10 ನಿಮ್ಮ ಗೆಳೆಯರಾಗಿದ್ದು, ನೀವು ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ

ಸಿ ಸಿ ನಂಬರ 87/2021
ಪಿ ಡಬ್ಲ್ಯೂ 1

**ದಿನಾಂಕ: 03-10-2024**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಸಿ ಡಬ್ಲ್ಯೂ 6 ಮತ್ತು 10 ನನ್ನ ಅಣ್ಣಂದಿರು. ಸಿ ಡಬ್ಲ್ಯೂ 2,3 ಹಾಗೂ ಸಿ ಡಬ್ಲ್ಯೂ 7 ರಿಂದ 9 ರವರು ಸಂಪಗಾಂವದವರು ಎಂದರೆ ಸರಿ. ಅವರೆಲ್ಲರೂ ನನಗೆ ಪರಿಚಯ ಇರುತ್ತಾರೆ. ಅವರು ನಿಮ್ಮ ಗೆಳೆಯರು ಎಂಂರೆ ಸರಿಯಲ್ಲ. ಸಿ ಡಬ್ಲ್ಯೂ 3 ರವರು ಮನೆ ನಿಮ್ಮ ಓಣಿಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ 10-15 ಮನೆ ಬಿಟ್ಟು ಇರುತ್ತದೆ ಎಂದು ನುಡಿಯುತ್ತಾರೆ. ಸಿ ಡಬ್ಲ್ಯೂ 2, 7 ರಿಂದ 9 ರವರ ನಿಮ್ಮ ಓಣಿಯವರು ಎಂದರೆ ಸಾಕ್ಷಿ ಇಲ್ಲ ನಮ್ಮ ಓಣಿ ಬಿಟ್ಟು ಇಲ್ಲ 2-3 ಓಣಿ ಬಿಟ್ಟು ಅವರು ಮನೆ ಇರುತ್ತದೆ ಎದು ನುಡಿಯುತ್ತಾರೆ. ಸಂಪಗಾಂವನಲ್ಲಿ 15000 ಜನಸಂಖ್ಯೆ ಇರುತ್ತದೆ ಎಂದರೆ ಸರಿ. ಅಲ್ಲಿ ಬಜಾರ ರಸ್ತೆಯಲ್ಲಿ ಕಾಮನಕೂಟ ಇರುತ್ತದೆ, ಅಲ್ಲಿ ಕಾಮನನ್ನ ದಹನ ಹಾಗೂ ಬಣ್ಣ ಆಡುತ್ತಾರೆ ಎಂದರೆ ಸರಿ. ಊರಿನ ಜನರೆಲ್ಲ ಅಲ್ಲಿ ಸೇರಿರುತ್ತಾರೆ ಎಂದರೆ ಸರಿ. ಅಲ್ಲಿ ಬಣ್ಣ ಮುಂಜಾನೆ 9 ಗಂಟೆಯಿಂದ ಮಧ್ಯಾಹ್ನ 1-30 ಗಂಟೆಯವರೆಗೆ ಬಣ್ಣ ಆಡುತ್ತಾರೆ ಎಂದರೆ ಸರಿ. 1.30 ಗೆ ಬಣ್ಣ ಮುಗಿದಿರುತ್ತದೆ ನಂತರ ಎಲ್ಲರೂ ಮನೆಗೆ ಹೋಗುತ್ತಾರೆ ಎಂದರೆ ಸರಿ. ಸಂಪಗಾಂವಲ್ಲಿ ಬಣ್ಣ ಜೋರು ಇರುತ್ತದೆ ಎಂದರೆ ಸರಿ. ಸದರಿ ಬಣ್ಣದ ಹಬ್ಬದಲ್ಲಿ ಒಬ್ಬರಿಗೊಬ್ಬರಿಗೂ ಬಣ್ಣ ಹಚ್ಚುವದು ಅದೇ ರೀತಿ ಮುಖದ ಗುರುತು ಸಿಗದ ಹಾಗೆ ಬಣ್ಣ ಹಾಕುತ್ತಾರೆ ಎಂದರೆ ಸರಿ. ನೀವು ಹೇಳಲಾದ ಘಟನೆ ಎಷ್ಟು ಗಂಟೆಗೆ ಆಗಿರುತ್ತದೆ ಎಂದರೆ ಸಾಕ್ಷಿ 10.30 ರಿಂದ 11.00 ಗಂಟೆ ಸಯಮದಲ್ಲಿ ಆಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಘಟನೆ ಸದರಿ ಸಮಯದಲ್ಲಿ ಆಗಿದೆ ಎಂದು ವೈದ್ಯರ ಮುಂದೆ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಘಟನೆ ಆದ ನಂತರ ಆಸ್ಪತ್ರೆಗೆ ಹೋದೆವು. ಸಂಪಗಾಂವದಿಂದ ಬೈಲಹೊಂಗಲಗೆ ಬರಲು 10-15 ನಿಮಿಷ ಎಂದರೆ ಸರಿ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಪೊಲೀಸರಿಗೆ ಏನೇನು ಆಗಿರುತ್ತದೆ ಎಂದು ಹೇಳಿರುತ್ತೇನೆ ಪೊಲೀಸರು ಫಿರ್ಯಾದಿಯನ್ನು ಬರೆದಿರುತ್ತಾರೆ ಎಂದು ಹೇಳುತ್ತಾರೆ.

ಚಾಸಾ-10 ಕಾಳಿನ ವ್ಯಾಪಾರ ಮಾಡುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ವೊದಲು ಪಂಚಾಯತಿ ಮೆಂಬರು ಇದ್ದರು ಎಂದರೆ ಸರಿ. 2ನೇ ಬಾರಿಗೆ ಚಾಸಾ-10ರವರು ಪಂಚಾಯತಿ ಚುನಾವನೆಗೆ ನಿಂತಾಗ ಆರಿಸಿ ಬರಲಿಲ್ಲ ಎಂದರೆ ಸರಿ. ಆರೋಪಿಗಳು ನಿಮಗೆ ಚುನಾವನೆಯಲ್ಲಿ ಸಹಾಯ ಮಾಡದ ಕಾರಣ ನಿಮಗೂ ಹಾಗೂ ಆರೋಪಿಗಳ ನಡುವೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ನಿಮ್ಮ ಮತ್ತು

ಆರೋಪಿಗಳ ನಡುವೆ ವೈಮನಸ್ಸು ಇದ್ದ ಕಾರಣ ನೀವು ಚಾಸಾ-6, ಚಾಸಾ-10 ಎಲ್ಲರೂ ಸೇರಿ ಪಿತೂರಿ ಮಾಡಿ ಆರೋಪಿಗಳ ವಿರುದ್ದ ದೂರ ನೀಡಿರುತ್ತೀರಿ ಎಂದರೆ ಸರಿಯಲ್ಲ. ಘಟನೆ ಆಗಿದೆ ಎಂದು ಹೇಳಲಾದ ಸ್ಥಳದಲ್ಲಿ ಸಾಕ್ಷಿದಾರರನ್ನು ಹೊರತುಪಡಿಸಿ ಮಂದಿ ಇದ್ದರು, ಎಂದರೆ ಸಾಕ್ಷಿಯು ಹೌದು ಇದ್ದರು ಎನ್ನುತ್ತಾರೆ. 2ನೇ ಆರೋಪಿ ನಿಮ್ಮ ವಿರುದ್ಧ ಬೈಲಹೊಂಗಲ ಪಿಎಸ ಕ್ರೈಂ ನಂಬರ ನಂಬರ 109/2023 ಹಾಗೂ 233/2023 ರಂತೆ ದೂರು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಅದೇ ರೀತಿ ಭಾರತಿ ನಾಗನಗೌಡರ ರವರು ಬೈಲಹೊಂಗಲ ಪಿಎಸ ಕ್ರೈಂ ನಂಬರ 107/2023 ರಂತೆ ದೂರು ಸಲ್ಲಿಸಿರುತ್ತಾರೆ ಎಂದರೆ ಸರಿ. ನೀವು ಊರಿನಲ್ಲಿ ಸುಳ್ಳುಸುಳ್ಳೆ ದಾದಾಗಿರಿ ಮಾಡುವುದು ಮಂದಿಯ ವಿರುದ್ಧ ದೂರು ನೀಡುವುದು ಮಾಡುತ್ತೀರಿ ಎಂದರೆ ಸರಿಯಲ್ಲ. ಪೊಲೀಸರು ನನ್ನ ಮರು ಹೇಳಿಕೆಯನ್ನು ಪಡೆದಿರುತ್ತಾರೆ. ನೀವು ಆರೋಪಿತರು ವಿರುದ್ದ ವೈಮನಸ್ಸು ಇಟ್ಟುಕೊಂಡು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತೀದ್ದಿರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ